ಅಮ್ಮ ಅವತ್ತು ಹೆಸರುಕಾಳು ಪಲ್ಯೆಯ ಜೊತೆ ಬಿಸಿಬಿಸಿ ಪಲಾವ್ ಮಾಡುತ್ತಿದ್ದರು. ಅದಕ್ಕಾಗಿಯೇ ಕಾಯುತ್ತಿದ್ದ ನಾನು, ತಪ್ಪಲೆ ಹಬೆಯಾರಿ ಕೆಳಗಿಳಿಸುವುದಕ್ಕೂ ಮುನ್ನ ಬಾಯಲ್ಲಿ ವಿವಿಧ ರಸವಂ ಸುರಿಸುತ್ತಾ ಅಮ್ಮನ ಹಿಂದೂ ಮುಂದೂ ಓಡಾಡುತ್ತಿದ್ದುದು ಆಕೆಗೆ ಇರುಸುಮುರುಸು ಉಂಟು ಮಾಡಿತ್ತು. ಅಮ್ಮ, ಅಪ್ಪ ಮತ್ತು ಅಣ್ಣನ ಜೊತೆ ಅವತ್ತಿನ ರಾತ್ರಿಯೇ ವರದನಹಳ್ಳಿಗೆ ಹೋಗುವ ತರಾತುರಿಯಲ್ಲಿದ್ದರು. ಜೊತೆಗೆ ಅಪ್ಪ ಬೇರೆ 'ಬೇಗ ಅಡುಗೆ ಕೆಲಸ ಮುಗಿಸು. ತಡ ಮಾಡಿದರೆ ಕೊನೇ ಬಸ್ಸು ತಪ್ಪಿ ಹೋಗಿ ನೆನ್ನೆಯಂತೆ ಇವತ್ತೂ ಹೋಗಲಾಗುವುದಿಲ್ಲ' ಎಂದು ಬಡಬಡಿಸುತ್ತಿದ್ದರು. ಅಣ್ಣ ಬೇರೆ 'ಅಮ್ಮಾ ಇನ್ನೂ ಎಷ್ಟೊತ್ತು? ಇವತ್ತು ಹಳ್ಳಿಗೆ ಹೋಗಲೇಬೇಕು. ರಾತ್ರಿ ಹೋದರೇನೇ ಆ ಬಚ್ಚ ಸಿಗೋದು. ಬೆಳ್ಗೆ ಹೊತ್ತೋದ್ರೆ ಆ ಬಚ್ಚ ಸಿಗಲ್ಲ' ಅಂತ ಹೇಳುತ್ತಿದ್ದರು. ಇದೆಲ್ಲಕ್ಕೂ ಕಳಶವಿಟ್ಟಂತೆ ನಾನು ಅಮ್ಮನ ಬಾಲದಂತೆ ತಪ್ಪಲೆಯಲ್ಲಿ ಬೇಯುತ್ತಿರುವ ಭಕ್ಷ್ಯವನ್ನು ಧ್ವಂಸ ಮಾಡಲು ಆಗಿನಿಂದಲೂ ಅಮ್ಮನನ್ನು 'ಅಮ್ಮಾ ತಾಯಿ, ರಸಗವಳ ಆಯ್ತಾ ಆಯ್ತಾ' ಅಂತ ಪೀಡಿಸುತಲಿದ್ದೆ. ಎಲ್ಲರೂ ಸೇರಿ ಒಂದೇ ಸಮನೆ ಒಟ್ಟಿಗೇ ಕಾಟ ಕೊಡಲು ಶುರುವಾಗಿ ಅಮ್ಮ ಪಟೀರ್! ಅಂತ ನನ್ನ ಕೆನ್ನೆಗೆ ಕೊಟ್ಟರು. ಬಿದ್ದ ಏಟಿನ ಸದ್ದು ಎಲ್ಲರಿಗೂ ಕೇಳಿಸಿತ್ತು. ಆಗ ಮೂರನೇ ಅಕ್ಕ ಬಂದು ನನ್ನನ್ನು ಸಮಾಧಾನ ಮಾಡಿದರು. ಆಗ ಸಿಲೋನ್ ಸ್ಟೇಷನ್‌ನಲ್ಲಿ ಗೀತೆ ಮೊಳಗುತ್ತಿತ್ತು 'ಯಾವ ಹೂವು ಯಾರ ಮುಡಿಗೋ..' ನಾನದನ್ನು 'ಯಾರ ಕೋಪ ಯಾರ ಮೇಲೋ' ಎಂದು ಬದಲಿಸಿಕೊಂಡೆ.

ಅಪ್ಪ ತಾನು ಕಷ್ಟಪಟ್ಟು ದುಡಿದ ದುಡ್ಡನ್ನು ಪ್ರತಿ ವಾರ ಎರಡು ರೂಪಾಯಿಯಂತೆ ಚೀಟಿ ಕಟ್ಟಿ ಒಂದು ಒಂದು ಕಲ್ಲಿನ ಚಿನ್ನದ ಉಂಗುರ ತಂದಿದ್ದರು. ತನ್ನ ಗಂಡ ಕಷ್ಟಪಟ್ಟು ಸಂಪಾದಿಸಿದ್ದು ಎಂದು ಅಮ್ಮನೂ ಅದನ್ನು ಜೋಪಾನವಾಗಿ ಇಟ್ಟಿದ್ದರು. ಹಾಕಿಕೊಂಡು ಯಾವುದಾದರೂ ಸಭೆ ಸಮಾರಂಭಗಳಿಗೆ ಹೋಗಲಿಕ್ಕಲ್ಲ. ಬದಲಾಗಿ ಮನೆಯಲ್ಲಿ ಕಷ್ಟ ಅಂತ ಬಂದಾಗ ಚಂಪಾಲಾಲನ ಬಳಿ ಅಡ ಇಡುವುದಕ್ಕೆ!

ಹೌದು ನಮಗೆ ಏನೇ ಕಷ್ಟ ಬಂದರೂ ಅದನ್ನು ನೀಗಿಸಲು ಅಪ್ಪ ದುಡಿದಿದ್ದ ಉಂಗುರ ನಮಗೆ ದೈವದಂತೆ ಸಹಾಯಕ್ಕೆ ಬರುತ್ತಿತ್ತು. ಅದನ್ನು ಅಡವಿಟ್ಟರೆ ಚಂಪಾಲಾಲೂ ಹಣ ಕೊಡುತ್ತಿದ್ದ. ಸಾಕಾಗಿದ್ದರೂ ಸಾಲದಿದ್ದರೂ ಅವನು ಕೊಟ್ಟಷ್ಟು ಹಣವನ್ನು ತಂದು ಬಂದಿದ್ದ ಆ ಕ್ಷಣದ ವಿಪತ್ತಿಂದ ಪಾರಾಗುತ್ತಿದ್ದೆವು. ಹಣ ಹೊಂದಿದಾಗ ಅದನ್ನು ಬಡ್ಡಿ ಸಮೇತ ಅಸಲು ಕೊಟ್ಟು ಅಪ್ಪ ಬಿಡಿಸಿ ತರುತ್ತಿದ್ದರು. ಅದು ನಮ್ಮ ಕಣ್ಣಿಗೆ ಕಾಣುವ ಸಾಕ್ಷಾತ್ ಭಗವಂತನಿಗಿಂತಲೂ ಹೆಚ್ಚು. ನನ್ನ ಉಳಿದಿಬ್ಬರು ಅಕ್ಕಂದಿರ ಮದುವೆಗೂ ಅದು ತನ್ನ ಮಹತ್ತರ ಕೊಡುಗೆಯನ್ನು ನೀಡಿತ್ತೆಂದರೆ ಅದರ ಪಾತ್ರ ಎಂಥದ್ದಿರಬೇಡ? ಅದೆಷ್ಟು ಸಲ ನಮ್ಮನೆಯಿಂದ ಚಂಪಾಲಾಲನ ಗಿರವಿ ಅಂಗಡಿಗೂ, ಗಿರವಿ ಅಂಗಡಿಯಿಂದ ನಮ್ಮನೆಗೂ ನಿರಂತರವಾಗಿ ಓಡಾಡಿದೆಯೋ! ಅದಕ್ಕೆಷ್ಟು ನೋವಾಗಿರುವುದೋ ಎಂದು ನಾನು ಬಹಳಷ್ಟು ಸಲ ಗಂಭೀರವಾಗಿ ಯೋಚಿಸಿದ್ದಿದೆ. ನಮ್ಮನೆಗೆ ಮರಳುವಾಗ ತವರು ಮನೆಗೆ ಬರುವ ಸಡಗರ, ಚಂಪಾಲಾಲನ ಬಳಿ ಹೋಗುವಾಗ ಗಂಡನ ಮನೆಗೆ ಹೋಗುವ ಯಾತನೆಯಂತೆ ಅದೆಷ್ಟು ಸಲ ಉಸಿರೆತ್ತದೆ ಮೂಕವಾಗಿ ಒಬ್ಬನೇ ನೋವುಂಡಿದೆಯೋ. ಅದರ ಕಷ್ಟ ಸುಖ ದುಃಖವನ್ನು ಅದು ನಮ್ಮ ಬಳಿ ಎಂದಿಗೂ ಹೇಳಿಕೊಂಡಿಲ್ಲ. ನಮ್ಮ ಮನೆಯ ಕ್ರಿಯಾಶೀಲ ದುಡಿಯುವ ಸದಸ್ಯನಂತಿರುವ ಈ ಒಂಟಿಕಲ್ಲಿನ ಉಂಗುರವೆಂದರೆ ನಮಗೆಲ್ಲರಿಗೂ ಬಲು ಪ್ರೀತಿ.

ಇಂತಿಪ್ಪ ಆ ಉಂಗುರ ಒಮ್ಮೆ ಅವಘಡದಲ್ಲಿ ಸಿಲುಕಿಕೊಂಡು ಬಿಟ್ಟಿತು. ಅದು ಅತ್ತ ನಮ್ಮ ಮನೆಯಲ್ಲಿಯೂ ಇರದೇ, ಅತ್ತ ಚಂಪಾಲಾಲನ ಅಂಗಡಿಗೂ ಹೋಗದೆ ಮುನಿಸಿಕೊಂಡು ಬಚ್ಚಪ್ಪನ ಕೈ ಸೇರಿಬಿಟ್ಟಿತ್ತು! ನಮ್ಮ ಮನೆಯ ಆಪತ್ಕಾಲೀನ ಬಂಧುವಾಗಿದ್ದ, ಮಹಾಲಕ್ಷ್ಮಿಯಂತೆ ಕಷ್ಟ ಬಂದಾಗಲೆಲ್ಲ ಕೈ ಹಿಡಿದು ನಮ್ಮನ್ನು ಪೊರೆಯುತ್ತಿದ್ದ ಆ ಉಂಗುರವನ್ನು ಬಚ್ಚನಿಂದ ತರುವ ಭಗೀರಥ ಪ್ರಯತ್ನವೆಂಬಂತೆ ಅವನಿದ್ದ ಹಳ್ಳಿಗೆ ಅಪ್ಪ ಅಮ್ಮ ಅಣ್ಣ ಮೂವರೂ ಆ ರಾತ್ರಿ ಹೊರಟಿದ್ದರು.

ಇಷ್ಟಕ್ಕೂ ಆದದ್ದೆಂದರೆ, ಈಗ್ಗೆ ಸುಮಾರು ದಿನಗಳ ಹಿಂದೆ ಆದಾಯ ತೆರಿಗೆಯವರು ಅಕ್ರಮ ಆಸ್ತಿ ಸಂಪಾದನೆಯ ಆರೋಪದ ಮೇಲೆ ಚಂಪಾಲಾಲನನ್ನು ಮೊದಲುಗೊಂಡು ಊರಿನ ಪ್ರಮುಖ ಗಿರವಿ ದುಖಾನ್ ನಡೆಸುವ ಮಾರ್ವಾಡಿಗಳ ಮೇಲೆ ಮುರಕೊಂಡು ಬೀಳುವ ವಿಷಯ ತಿಳಿದಿದ್ದೇ, ಚಂಪಾಲಾಲೂ ಸೇರಿ ಎಲ್ಲ ಮಾರ್ವಾಡಿಗಳು ತಮ್ಮ ತಮ್ಮ ದುಖಾನ್ ಮುಚ್ಚಿ ಊರನ್ನು ರಾತ್ರೋರಾತ್ರಿ ತೊರೆದು ಮಾಯವಾಗಿಬಿಟ್ಟರು. ಇಂತಹ ದುರ್ಭಿಕ್ಷ ಸಮಯದಲ್ಲಿ ಕರ್ಮಕ್ಕೆ ತಕ್ಕಂತೆ ಈ ಒಂಟಿಕಲ್ಲಿಗೆ ತನ್ನ ಗಂಡನ ಮನೆ ನೆನಪಾಗಬೇಕೇ? ಅದು ಮತ್ತೆ ತನ್ನ ಸ್ವಸ್ಥಾನಕ್ಕೆ ಹೋಗುವ ಸಮಯ ಬಂದಿತ್ತು, ಆದರೆ ಸಕಾಲಕ್ಕೆ ಹೋಗಲಿಕ್ಕಾಗಲಿಲ್ಲವೆಂದರೆ ತಪ್ಪು ಒಂಟಿಕಲ್ಲಿನದ್ದಲ್ಲ, ಗಂಡನ ಮನೆ ತೆರೆದಿರಲಿಲ್ಲವಷ್ಟೇ.

ಇತ್ತ ಗಂಡನ ಮನೆಗೆ ಇದು ಹೋಗಲಿಲ್ಲವೆಂದರೆ ನಮಗೆ ಹೊತ್ತು ಕಳೆಯುವುದಿಲ್ಲ, ಬಾಯಿಗೆ ತುತ್ತು ಎಟಕುವುದಿಲ್ಲ. ಇಂತಹ ವಿಷಮ ಘಳಿಗೆಯಲ್ಲಿ ನಮ್ಮ ಆಪತ್ಬಾಂಧವನಾದ ವೆಂಕಟರಮಣನಾದವನೇ ಈ ಬಚ್ಚಪ್ಪ. ಪೇಟೆಗೆಂದು ಬಂದವನು ಹಾಗೇ ಲೋಕಾಭಿರಾಮವಾಗಿ ಎಂದೂ ಬರುವಂತೆ ನಮ್ಮ ಮನೆಗೆ ಎಲೆ ಅಡಿಕೆ ಸುಣ್ಣಕ್ಕೆ ಬಂದವನು ಮನೆಯ ವಾತಾವರಣ ನೋಡಿ ದಿಗ್ಮೂಢನಾಗಿದ್ದಾನೆ. ಕಣ್ಣಿಗೆ ಕತ್ತಲೆ ಬಂದಂತಾಗಿದೆ. ಅವನ ಕರುಳು ಬೆಂಕಿಯಲ್ಲಿ ಬಿದ್ದು ಉರಿಯ ತೊಡಗಿದೆ. ಅಯ್ಯೋ ಹೇಗಿದ್ದ ಮನೆ ಹೇಗಾಗಿ ಹೋಯಿತಲ್ಲಪ್ಪಾ! ಮನೆಗೆ ಬಂದರೆ ಬಾ ಕುಳಿತುಕೋ ಎಂದು ಕುಶಲ ವಿಚಾರಿಸುತ್ತಿದ್ದವರ ಮುಖ ನೋಡಿದರೀಗ ಏಕೆ ಬಂದೆಂದು ಕೇಳುವಂತಿದೆ. ಮನೆ ಯಜಮಾನ ಓಹ್ ಬಚ್ಚೂ ಅಂತಿದ್ದ. ಯಜಮಾನತಿ ಅಣ್ಣಾ ಬಚ್ಚಣ್ಣೋ ಅಂತಿದ್ಲು. ದೊಡ್ಮಗ ಬಚ್ಚಣ್ಣೋರೇ ಅಂತಿದ್ದ. ಮಗ್ಳು ನೀರ್ಬೇಕಾ, ಪಾನ್ಕ ತರ್ಲೇನಣ್ಣ ಅಂತಿತ್ತು. ಈ ಹಸಿ ಮಗಾ ಯಾರೋ ದೊಡ್ಡ್ ಮನ್ಸ ಬಂದವ್ನೆ ಕೂತ್ಕೊಳ್ಳಿ ಅಂತ ಮಣೆ ಆಕ್ತಿದ್ದ. ಈಗೇನಾಗಿದೆ ಇವ್ರಿಗೆಲ್ಲಾ ಎಂದು ಸ್ವಾನೆ ಆತಂಕಕ್ಕೀಡಾಗಿ ಕಾರಣ ವಿಚಾರಿಸಲು, ನಡೆದಿರುವ ಮತ್ತು ನಡೆಯಬಹುದಾದ ಮುಂದಿನ ವಿದ್ಯಮಾನಗಳನ್ನು ತನ್ನ ಮಸ್ತಿಷ್ಕದಲ್ಲೇ ಕೂಡಿ ಕಳೆದು ತನ್ನದೊಂದು ಬೃಹತ್ ಉಪಾಯವೊಂದನ್ನು ಬಿನ್ನವಿಸಿದ.

ಅದರ ಪ್ರಕಾರ ಒಂಟಿಕಲ್ಲಿಗೆ ತನ್ನ ಗಂಡನ ಮನೆಗೆ ಹೋಗಲಾಗದಿದ್ದರೇನಂತೆ? ಅದಕ್ಕೆ ಬಂಧುಬಳಗದಂತಿರುವ ತನ್ನ ಮನೆಗೆ ಕಳುಹಬಹುದಲ್ಲಾ? ನಾನೂ ಅದನ್ನು ಚೆನ್ನಾಗಿ ನೋಡಿಕೊಳ್ಳುವೆ. ಯಾರೂ ಅದರ ಮೈ ಮುಟ್ಟದ ಹಾಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುವೆ. ಅದೂ ಎಷ್ಟು ಸಲಾಂತ ಒಂದೇ ಮನೆಯಲ್ಲೇ ಇರಬೇಕು? ಒಬ್ಬನ ಮನೆಗೇ ಹೋಗಬೇಕು? ಏಕತಾನತೆ ಅದಕ್ಕೂ ಕಾಡುವುದಿಲ್ಲವೇನೂ? ಅದಕ್ಕೇ ಅದನ್ನು ಆಗಾಗ ಪ್ರವಾಸ ಕಳಿಸಬೇಕು. ಹೊಸ ಗಾಳಿ, ಹೊಸ ವಾತಾವರಣ

